



**ಆಧುನಿಕ ಜಗತ್ತಿನ ಮಾಯಾಲೋಕ, ಜಾನಪದವಾಗಿರುವ ಸಿನಿಮಾ ಹಲಬಗೆಯಲ್ಲಿ ನೋಡುಗರನ್ನು ಕಾಡುತ್ತ, ಪರವಶಗೊಳಿಸುತ್ತ ಬಂದಿದೆ. ವಿಶಿಷ್ಟ ಸಿನಿಮಾಗಳ ಮಾಂತ್ರಿಕತೆಯನ್ನು ಸಿನಿರಸಿಕರಿಗೆ ಇಲ್ಲಿ ಪರಿಚಯಿಸಲಾಗುತ್ತದೆ. ತಮ್ಮ ಚಿತ್ತವನ್ನು ಸೂರೆಗೊಂಡ, ಮನಸಿನ ಪುಟದಲ್ಲಿ ದಾಖಲಾದ ಅನನ್ಯ ಸಿನಿಮಾ ಒಂದರ ಚಿತ್ರಕ ಬರವಣಿಗೆ ಇಲ್ಲಿದೆ**

---

**2007**ನೇ ಇಸವಿಯಲ್ಲಿ 'ತಾರೆ ಜಮೀನ್ ಪರ್' ಹಿಂದಿ ಚಿತ್ರ ತೆರೆಕಂಡಿತು. 'ಡಿಸ್‌ಲೆಕ್ಸಿಯಾ' ಸಮಸ್ಯೆ ಇರುವ ಬಾಲಕ ಓದಿನಲ್ಲಿ ಹಿಂದುಳಿದು ಪಡುವ ಪಡಿಪಾಟಲು, ಅವನ ಪೋಷಕರ ತಲ್ಲಣಗಳು, ಆಮೇಲೆ ಬೋರ್ಡಿಂಗ್ ಶಾಲೆಯಲ್ಲಿ ಅವನು ಪೇಂಟಿಂಗ್ ಮಾಡುವ ಮೂಲಕ ಗಮನಸೆಳೆಯುವ ಸನ್ನಿವೇಶಗಳನ್ನು ಆ ಸಿನಿಮಾ ಒಳಗೊಂಡಿತ್ತು. ನಿರ್ದೇಶಕ ಅಮೋಲ್ ಗುಪ್ತೆ ಭಾರತೀಯ ಜಾಯಮಾನದ ಭಾವಗಳನ್ನೆಲ್ಲ ಸೋಸಿ, ಆ ಸಿನಿಮಾದಲ್ಲಿ ಹದವರಿತಂತೆ ಮೆಲೋಡ್ರಾಮಾ ಸೃಷ್ಟಿಸಿದ್ದರು. ಅದನ್ನು ನೋಡಿದ ಬಹುತೇಕರ ಹೃದಯಗಳು ಆರ್ದ್ರಗೊಂಡಿದ್ದವು.

ಅಷ್ಟು ಜನಪ್ರಿಯವಾದ 'ತಾರೆ ಜಮೀನ್ ಪರ್' ಗಂಭೀರವಾದ ಸಾಮಾಜಿಕ ಸಮಸ್ಯೆಯೊಂದನ್ನು ಸೃಷ್ಟಿಸಿದ್ದು ಕೆಲವರಿಗಷ್ಟೇ ಗೊತ್ತಾಯಿತು. ಮನಃಶಾಸ್ತ್ರ ಅಧ್ಯಯನ ಮಾಡುವ ಬೆಂಗಳೂರಿನ ಪ್ರೊ. ಎಂ. ಶ್ರೀಧರಮೂರ್ತಿ ಒಮ್ಮೆ ಆ ಸಮಸ್ಯೆಯ ಕಡೆ ಬೆಳಕು ಚೆಲ್ಲಿದರು. ಅದೇನೆಂದರೆ – 'ತಾರೆ ಜಮೀನ್ ಪರ್' ಹುಡುಗನ ಯಶೋಗಾಥೆ ಕಂಡ ಪೋಷಕರು ಅಂಥದ್ದೇ ಸಮಸ್ಯೆ ಇರುವ ತಮ್ಮ ಮಗನೂ ಹಾಗೆಯೇ ಏನಾದರೂ ಸಾಧಿಸಿಯಾನು ಎಂದು ಆಶಾವಾದಿಗಳಾದರು. ಈ ಆಶಾವಾದ ಮನೋಬಲ ತುಂಬುತ್ತದಾದರೂ, ಅಂದುಕೊಂಡಂತೆ ಮಕ್ಕಳು ಸಾಧನೆ ಮಾಡದೇಹೋದಾಗ ಆಗುವ ಹತಾಶೆ ಬಣ್ಣಿಸಲಸದಳ. 'ಡಿಸ್‌ಲೆಕ್ಸಿಯಾ' ಸಮಸ್ಯೆ ಇರುವ ನೂರಕ್ಕೆ ತೊಂಬತ್ತೊಂಬತ್ತು ಮಕ್ಕಳು 'ತಾರೆ ಜಮೀನ್ ಪರ್' ಚಿತ್ರದಂಥ ಹೀರೊ ಆಗಲಾರ ಎನ್ನುವುದು